ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 1-5
©IIMRD, Mysuru

IIMRD JOURNALS
www.iimrd.com

# ವಚನಕಾರರ ಮಾನವೀಯ ಚಿಂತನೆಗಳು

ಡಾ. ಎಸ್.ಬಿ. ರಾಠೋಡ[1]

**ಪೀಠಿಕೆ:**

*ದಯವಿಲ್ಲದ ಧರ್ಮವದೇವುದಯ್ಯಾ?*
*ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ*
*ದಯವೇ ಧರ್ಮದ ಮೂಲವಯ್ಯಾ*
*ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ*

ದಯೆಯು ದೇವಸ್ವರೂಪವು ದಯವೇ ಮಾನವೀಯತೆಯ ಲಕ್ಷಣವು. ದಯವೇ ಧರ್ಮದ ಮೂಲವು. ದಯವಿಲ್ಲದ ದೇವಭಕ್ತಿ ಆಚಾರ ಕ್ರೀಯೆಗಳೆಲ್ಲ ನಿಷ್ಪ್ರಯೋಜಕ. ದಯವಿಲ್ಲದ ಮಾನವ ಮಾನವನಲ್ಲ, ದಾನವ. ದಯವಿಲ್ಲದ ಧರ್ಮ ಧರ್ಮವಲ್ಲ, ಅಧರ್ಮ. ಹೀಗೆ ವಿಶ್ವ ವಿಭೂತಿ, ವಿಶ್ವಸಂದೇಶ ಸಾರಿದಂತ ಮಹಾನ್ ಮೇಧಾವಿ, ವಿಶ್ವಗುರು ಅಣ್ಣ ಬಸವಣ್ಣನವರು ಮಾನವೀಯತೆಯ ಕುರಿತು ಹೇಳಿದಂತಹ ವಚನವಿದು.

ದೇವರು ಜಗತ್ತನ್ನು ಜೀವಿಗಳನ್ನು ಕಾಪಾಡಲು ದಯೆಯ ಸ್ವರೂಪದಿಂದ ಮಾನವೀಯತೆಯುಳ್ಳ ಮಹಾತ್ಮರ ಹೃದಯದಲ್ಲಿ ಮನೆ ಮಾಡಿಕೊಂಡಿದ್ದಾನೆ. ದಯವೇ ದೇವರು, ಧರ್ಮ ಎಲ್ಲವೂ ಸಂಕಷ್ಟದಲ್ಲಿರುವ ಮಾನವತಾವಾದಿ ಪ್ರಾಣಿಗಳ ನೋವು ನಿವಾರಿಸಲು ದೇವರು ದಯೆಯ ಸ್ವರೂಪದಿಂದ ಸಹೃದಯಿಗಳ ಮನದಲ್ಲಿ ನೆಲಸುವನು. ಕಠಿಣವಾದ ಕಟುಕಮನದ ಮಾನವರ ಹಿಂಸೆ ನೋವುಗಳಿಂದ ಕಳವಳಗೊಂಡ ಜೀವಿಗಳಿಗೆ ಕರುಣಾಳು ಮಾನವರ ಮಾನವೀಯ ಮನದಲ್ಲಿ ನೆಲೆಗೊಂಡ ದಯವೇ ಸಾಂತ್ವನ ನೀಡುವುದು.

ದಯವೇ ಮೂರ್ತಿಗೊಂಡು ಮರ್ತ್ಯಲೋಕದಲ್ಲಿ ಬೆಳಗಿದ ಮಹಾನ್ ಬೆಳಕು. ಗೌತಮ ಬುದ್ಧರ ಒಂದು ಉದಾಹರಣೆ ನೋಡಬಹುದು. ಗೌತಮ ಬುದ್ಧನು ಬಾಲ್ಯದಲ್ಲಿ ಒಂದು ದಿನ ತಮ್ಮ ತೋಟದಲ್ಲಿ ಅಡ್ಡಾಡುವಾಗ ದೇವದತ್ತನ ಬಾಣಕ್ಕೆ ಗುರಿಯಾದ ಹಂಸ ಪಕ್ಷಿ ಆತನ ಕಣ್ಣಿಗೆ ಕಂಡಾಗ ದಯಾ ಮೂರ್ತಿಯಾದ ಬುದ್ಧನು ಆ ಪಕ್ಷಿಯ ನೋವನರಿತು ಅದನಪ್ಪಿ ಆಲಂಗಿಸಿ, ಅದರ ನೋವಿನಲ್ಲಿ ತಾನು ಭಾಗಿಯಾಗಿ ಉಪಚರಿಸಿದನು. ಮತ್ತೊಂದು ಸಲ ಬುದ್ಧನು ವಿಹಾರಕ್ಕೆ ಹೊರಟಾಗ, ಅತಿಸಾರದಿಂದ

[1] *ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ – 586205.*

ಬಳಲುತ್ತಿದ್ದ ರೋಗಿ ಬಿಕ್ಷುಕನನ್ನು ಕಂಡು ಕಾರುಣ್ಯ ತುಂಬಿದ ಹೃದಯದಿಂದ ಆತನನ್ನು ಹಿಡಿದೆತ್ತಿದನು. ತದನಂತರ ಆನಂದನೆಂಬ ತನ್ನ ಶಿಷ್ಯನಿಂದ ನೀರು ತರಿಸಿ, ಆ ರೋಗಿಯ ಸರ್ವಾಂಗವನ್ನು ತೊಳೆದು ಸ್ನಾನಮಾಡಿಸಿ ಹಾಸಿಗೆ ಬದಲಿಸಿ ಮಲಗಿಸಿ ಉಪಚರಿಸಿದನು.

ಹಾಗೆಯೇ ಅಂಗುಲಿ ಮಾಲಾ ಎಂಬ ಕ್ರೂರ ಕಳ್ಳನು ಅಡವಿಯಲ್ಲಿದ್ದು, ದಾರಿಹೋಕರನ್ನು ಸುಲಿಗೆ ಮಾಡಿ ಅವರ ಬೆರಳುಗಳನ್ನು ಕತ್ತರಿಸಿ ಅವುಗಳ ಮಾಲೆಗಳಿಂದ ಕೊರಳನ್ನು ತುಂಬಿಸಿ ಕೊಳ್ಳುತ್ತಿದ್ದನು. ಅಂತಹ ಕ್ರೂರ ವ್ಯಕ್ತಿಯಾದ ಅಂಗುಲಿ ಮಾಲಾನನ್ನು ಕರುಣಾಮಯಿಯಾದ ಬುದ್ಧನು ಪರಿವರ್ತಿಸಿ, ಆತನನ್ನು ಭಿಕ್ಕು ಸಂಘದಲ್ಲೊಬ್ಬನ್ನಾಗಿಸಿ ಜನರ ಹಿಂಸೆ ನೋವುಗಳನ್ನು ನಿವಾರಿಸಿದನು. ಹೀಗೆ ಬುದ್ಧನು ದಯೆಯ ಸ್ವರೂಪಿ ಮಾನವತಾವಾದಿ ಆಗಿದ್ದನು.

ಹನ್ನೆರಡನೆಯ ಶತಮಾನದ ಬಸವ ಪರಂಪರೆಯ ಶರಣರಲ್ಲಿ ಅಹಿಂಸಾ ಮೂರ್ತಿಯಾಗಿದ್ದ ಅಜ್ಞಾತ ವಚನಕಾರನಾದ ದಾಸರಯ್ಯನು ಲಿಂಗಾರ್ಚನೆಗೆಂದು ಹೂ ಪತ್ರಿಗಳನ್ನು ಸಹ ಹರಿಯುತ್ತಿರಲಿಲ್ಲ. ಯಾಕೆಂದರೆ ಮರಗಳಿಗೂ ಜೀವವುಂಟು. ಅವುಗಳಿಗೆ ನೋವುಂಟು ಮಾಡುವುದು ಮಾನವೀಯತೆಲ್ಲ. ಅದು ಹಿಂಸೆಯೆಂಬುದು ದಾಸರಯ್ಯನಲ್ಲಿದ್ದ ದಯೆಯ ಸ್ವರೂಪ. ಆತನ ಸಹನೆ ದಯೆಯನ್ನು ಸಹಿಸದ ಕೆಲ ಕಿಡಿಗೇಡಿಗಳು ಆತನನ್ನು ಹೊಡೆದು ಸಿಟ್ಟಿಗೆಬ್ಬಿಸಲು ಕುತಂತ್ರಮಾಡಿ, ಒಬ್ಬ ಮೊಟಮಲ್ಲನೆಂಬವನನ್ನು ಕಳಿಸಿದರು. ಆ ಮೋಟಮಲ್ಲ ಅಹಿಂಸಾಮೂರ್ತಿ ದಾಸರಯ್ಯನನ್ನು ತನ್ನ ಮನಬಂದಂತೆ ತನ್ನ ಮೋಟುಗೈಯಿಂದ ತಿವಿದು ಹೊಡೆದು ಬಡಿದು ನೋವನ್ನುಂಟು ಮಾಡಿ ಸೋತು ನಿಂತುಬಿಟ್ಟನು. ಆ ದಯಾಸ್ವರೂಪಿ ದಾಸರಯ್ಯನು. ಏಕಯ್ಯಾ ದಣಿವಾಯಿತೆ? ಎಂದು ಕಾರುಣ್ಯದಿಂದ ನುಡಿಯುತ್ತ ಮೋಟಮಲ್ಲನ ಕೈ ನೊಂದಿದೆಯೆಂದು ಒತ್ತಿದ್ದನು. ಇಂತಹ ದಯಾಮೂರ್ತಿ ದಾಸರಯ್ಯನಂತಹ ಮಾನವೀ ಚಿಂತಕರು ಪ್ರಪಂಚದಲ್ಲಿ ಹುಡುಕಿದರು ದೊರೆಯಲಾರರು.

ಕಲ್ಲು ಹೃದಯ ಕೆಲ ಕಟುಕ ಮಾನವರು ಮಾಂಸದಾಸೆಗೆ ಪ್ರಾಣಿಗಳನ್ನು ನಿರ್ದಯವಾಗಿ ಕೊಂದು ತಿನ್ನುವರು. ಪ್ರಾಣಿಗಳ ಸಾವು ನೋವಿನಲ್ಲಿ ತಾವು ನಲಿವರು. ಅವುಗಳ ಸಾವಿನಲ್ಲಿ ತಾವು ಬದುಕಬೇಕೆನ್ನುವರು. ಇಂಥವರು ಮಾನವರಲ್ಲ ಇವರಲ್ಲಿ ಮಾನವೀಯತೆಯ ಅಂಶವು ಕಾಣಲ್ಲ. ಆದ್ದರಿಂದ ಇವರು ದಾನವರು. ಈ ದಾನವರ ದಾರಿಯತ್ತ ತನ್ನನ್ನು ನಡೆಸ ಬೇಡವೆಂದು ಬಸವಣ್ಣನವರು ಬೇಡಿಕೊಂಡ ಪರಿ ಈ ಕೆಳಗಿನಂತಿದೆ.

*ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ*
*ಒಲ್ಲೆನಯ್ಯಾ ಪರಸತಿಯರ ಸಂಗವ*
*ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದು!*
*ಬಲ್ಲದ ಹಾಳೆಯಂತೆ ಒಂದು ಮನವ ಮಾಡಿನಿಲ್ಲೆಂದು*
*ನಿಲಿಸಯ್ಯಾ ಕೂಡಲಸಂಗಮದೇವಾ.*

ಎಂಬುದು ದೇವರಲ್ಲಿ ಬಸವಣ್ಣನವರ ಭಿನ್ನಹ. ವೇದವನೋದಿ ಯಜ್ಞಯಾಗಕ್ಕೆ ಪಶುಬಲಿ ಕೊಡುವವರ ಅಜ್ಞಾನ ಹಾಗೂ ಮುಗ್ಧ ಹೊಲೆಯನ ಅಸಹಾಯಕತೆಯನ್ನು ಕಂಡು ಮರ, ಮರ ಮರಗವನು ಬಸವಣ್ಣ. ಆ ದುಃಸ್ಥಿತಿಯಿಂದ ಪಾರಾಗಲು ಆ ಅಸಹಾಯಕ ಪ್ರಾಣಿಗೆ ಪ್ರತಿಭಟಿಸೆಂದು ಕಿವಿ ಮಾತು ಹೇಳುವನು.

*ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೆ ಅಳು ಕಂಡಾ!*

*ವೇದವನೋದಿದವರ ಮುಂದೆ ಅಳುಕಂಡಾ!*

*ಶಾಸ್ತ್ರವನೊದಿದವರ ಮುಂದೆ ಅಳುಕಂಡಾ!*

*ನೀನತ್ತುದಕ್ಕೆ ತಕ್ಕುವ ಮಾಡುವ ಕೂಡಲಸಂಗಮದೇವಾ*

ಇತ್ತ ದೇವರ ಹೆಸರಿನಿಂದ ಪ್ರಾಣಿ ಹಿಂಸೆ ಮಾಡುವ ಮಾನವಂಗೆ ಒಂದು ಎಚ್ಚರಿಕೆ ಗಂಟೆಯನ್ನು ನೀಡುತ್ತಾನೆ. ಮಹಾಯೋಗಿ ಅಕ್ಕಮಹಾದೇವಿ ದಯೆಯ, ಮಾನವೀಯತೆಯ ಸಾಕಾರ ಸ್ವರೂಪಿಣಿ ಆಗಿದ್ದಳು. ಜಲ, ಜೀವ, ಜಂತುಗಳು ಕುರಿತು ಈ ಕೆಳಗಿನ ವಚನದಲ್ಲಿ ಮಾರ್ಮಿಕವಾಗಿ ಹೇಳಿದ್ದಾಳೆ.

*ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ*

*ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ*

*ತನ್ನ ಮನೆಯಲೊಂದು ಶಿಶು ಸತ್ತರೆ ಮರುಗುವಂತೆ ಅವಗೇಕೆ ಮರುಗನು?*

ಅಕ್ಕಮಹಾದೇವಿ ಪ್ರಾಣಿಗಳ ನೋವಿನಲ್ಲಿ ತಾನೊಂದಾಗಿ ನೊಂದು ನುಡಿದ ಮಾತು ಅರ್ಥವತ್ತಾಗಿದೆ. ಪ್ರಾಣಿಗಳನ್ನು ಕೊಂದು ನಲಿದಾಡುವ ಜಲಗಾರ ತನ್ನ ಶಿಶು ಸತ್ತರೆ ಮರುಗುವನೆಂಬುದು ಜಗಕ್ಕೆಲ್ಲ ಒಂದು ನಗೆಗೇಡಿಗೆ ಕಾರಣವಾಗಿದೆ.

ಮಾರಕಾಸ್ತ್ರಗಳಿಂದ ಇರಿವುದು ಕೊಲ್ಲುವುದು ಮನದಲ್ಲಿ ಮಾಯಾಮಲ ತುಂಬಿದ ಮಾನವರ ದುರಾಚಾರವೆ ಹೊರತು ನಿರ್ಮಲ ಮಲಕಾಯದವರ ಸದಾಚಾರವಲ್ಲವೆಂದು ಮಹಾಶರಣರು ಸಾರಿ ಸಾರಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಎಲ್ಲ ಪ್ರಾಣಿಗಳೂ ದೇವ ಸ್ವರೂಪವೆಂದು ಕಾಣಬೇಕೆಂದು ಭೋದಿಸಿದ್ದಾರೆ ಮತ್ತು ಸಕಲ ಪ್ರಾಣಿಗಳಲ್ಲಿಯೂ ಶಿವನನ್ನು ಕಂಡು ಕಾರುಣ್ಯಮಯಿಯಾಗಿರಲು ಕರೆಕೊಡುತ್ತಾರೆ.

ಹೀಗೆ ಎಲ್ಲ ವಚನಕಾರರು ತೆರೆದ ಕಣ್ಣುಗಳಿಂದ ಎದುರಿಸಿದವರು. ಸುತ್ತಮುತ್ತಲಿನ ಸಹಜೀವಿಗಳ ದುಃಖವನ್ನೂ, ಅಜ್ಞಾನವನ್ನೂ ಮತ್ತು ಅಳಲನ್ನೂ ಕಂಡು ಮರುಗಿದವರು, ಕೆರಳಿದವರು. ಸಮಸ್ಯೆಗಳ ಹಿಮಾಲಯವನ್ನು ಮೆಟ್ಟಿನಿಂತು ಸಾಧನೆಯಲ್ಲಿ ಮೇಲೆರಿ ಸತ್ಯವನ್ನು ಕಂಡವರು. ಈ ಎಲ್ಲ ಮಾನವೀಯ ಅನುಭವ, ಸಾಧನೆ, ನಿರೀಕ್ಷಣೆಗಳಿಂದ ವಿಕಾಸಗೊಂಡ ಅವರ ಚೇತನ ವಚನರೂಪದಲ್ಲಿ ಮಿಡಿದು ಹಾಡಿವೆ, ಕಳಕಳೆ ವ್ಯಕ್ತಪಡಿಸಿವೆ. ಕೆಲವು ಶರಣರಂತೂ ಒಂದು ಕಡೆ ಸಾಧಕರಾದರೆ, ಇನ್ನೊಂದು ಕಡೆ ಸಮಾಜ ಸೇವಕರು ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗರು ಮತ್ತು ಕ್ರಾಂತಿಕಾರರು. ಆದರೂ ತಮ್ಮ ನಿತ್ಯಜೀವನದ ಕಾಯಕವನ್ನು ನಮ್ರಭಾವದಿಂದ ಮಾಡುವ ಕುಶಲಕರ್ಮಿಗಳು

ಜೀವನವನ್ನು ತೆರೆದ ಕಣ್ಣಿನಿಂದ ನೋಡಿ, ಲೋಕದ ಕಷ್ಟಕಾರ್ಪಣ್ಯಗಳನ್ನು ಕಂಡು ಮರ ಮರ ಮರಗಿದವರು, ಕಷ್ಟ ಸುಖಗಳನ್ನು ತಾವೂ ಉಂಡವರು, ಸ್ತುತಿನಿಂದೆಗಳನ್ನು ಏಕ ಪ್ರಕಾರವಾಗಿ ಬರಮಾಡಿಕೊಂಡವರು, ಈ ಎಲ್ಲ ಮುಖಗಳಿಂದ ನೂರಾರು ಅನುಭವಗಳನ್ನು ಪಡೆದು ಅವರ ಚೇತನ ಶ್ರೀಮಂತವಾಗಿದೆ, ಗಗನಗಾಮಿಯಾಗಿ ಮೇಲೇರಿದೆ. ಅದೆಲ್ಲದರ ಪ್ರಭಾವವನ್ನು ವಚನಗಳಲ್ಲಿ ಕಾಣುತ್ತೇವೆ. ತಮ್ಮ ಅಪಾರವಾದ ಅನುಭವವನ್ನು ಅನ್ಯ ಹೃದಯ ವೇದ್ಯವಾಗುವಂತೆ ಹೇಳುವ ಶರಣರ ಶಕ್ತಿಯೂ ಅಪೂರ್ವವಾದ ಸಿದ್ಧಿ.

ಆದರೆ ಶರಣರು ಕಾವ್ಯವನ್ನು ಬರೆಯಲು ಹೊರಟ ಕವಿಗಳಲ್ಲ. ಪ್ರಕೃರ್ತಿ ಸೌಂದರ್ಯವನ್ನು ವರ್ಣಿಸಲು ತೊಡಗಿದವರಲ್ಲ. ಅವರು ಬರೆದ ಕಾವ್ಯ ಜೀವನಕಾವ್ಯ. ಜೀವನ ಸೌಂದರ್ಯವೇ ಕಾವ್ಯವಾಯಿತು. ಅವರ, ನುಡಿಯಲ್ಲಿ ವರ್ಣಿಸಿದುದು ಬಾಹ್ಯ ಪ್ರಪಂಚದ ಪ್ರಕೃತಿ ಸೌಂದರ್ಯವನ್ನಲ್ಲ. ಅಂತರಂಗದ ಆತ್ಮಸೌಂದರ್ಯವನ್ನು ತನ್ನ ಸಹಜ ಸುಂದರವಾದ ನಿಜಸ್ವರೂಪವನ್ನು ಕಂಡುಕೊಳ್ಳಲು ಸಾಧಕನು ಕೈಗೊಳ್ಳುವ ಸಾಹಸ ಯಾತ್ರೆಯ ವಿವಿಧ ನಿಲ್ದಾಣಗಳು ವಚನ ಸಾಹಿತ್ಯದಲ್ಲಿ ಸಿಗುತ್ತವೆ.

ಸಂಸಾರದ ಅನಿತ್ಯತೆ, ನಿಸ್ಸಾರತೆ, ಮನಸ್ಸಿನ ಚಂಚಲತೆ, ಕ್ಷುದ್ರತೆ, ಆಡಂಬರದ ಭಕ್ತಿ, ಅಂತರಂಗದ ಶುದ್ಧಿ, ಭಕ್ತಿಯ ಮಹತ್ವ, ಶರಣರ ಹಿರಿಮೆ ಇವುಗಳನ್ನೆಲ್ಲ ವಚನಕಾರರು ವಿವೇಚಿಸಿದ್ದಾರೆ, ವಿಮರ್ಶಿಸಿದ್ದಾರೆ. ಸಮಾನತೆಯ ಕುರಿತು ಹೋರಾಡಿದ ಪರಿ ಈ ಕೆಳಗಿನ ವಚನದಲ್ಲಿ ನೋಡಬಹುದು.

***ಕೊಲ್ಲುವವನೆ ಮಾದಿಗ, ಹೊಲಸುತಿಂಬುವವನೆ ಹೊಲೆಯ!***
***ಕುಲವೇನೋ ಆವಂದಿರ ಕುಲವೇನೊ!***
***ಸಕಲ ಜೀವಾತ್ಮರಿಗೆ ಲೇಸನೆ ಬಯಸುವ***
***ನಮ್ಮ ಕೂಡಲಸಂಗನ ಶರಣರೇ ಕುಲಜರು!***

ಹುಟ್ಟಿನಿಂದ ಕುಲ ಹೊಲೆಯನ್ನೆಳೆಯದೆ ಸತ್ಯ ಸದಾಚಾರ್ ಸದ್ ಭಾವಗಳಿಂದ ವ್ಯಕ್ತಿಯ ಶ್ರೇಷ್ಠತೆಯನ್ನು ಅಳೆಯಬೇಕು. ಎಂದು ಆ ವ್ಯಕ್ತಿಯ ಹುಟ್ಟಿನಿಂದ ಮೇಲು-ಕೀಳು ಜಾತಿಯನರಸದೆ ನಡೆ, ನುಡಿ, ಆಚಾರ, ವಿಚಾರ ಅನುಭಾವದಿಂದ ಆತನ ಅರ್ಹತೆಯನಳೆಯಬೇಕೆಂದು, ಎಲ್ಲ ಜೀವಿಗಳಿಗೆ ಒಳ್ಳೆಯದನ್ನೇ ಬಯಸುವ ಶರಣರೆ ಶ್ರೇಷ್ಠರೆಂದು ಸಾರಿ ಹೇಳಿದ್ದಾರೆ.

ಜಾತಿ ಪದ್ಧತಿಯ ದಾಸ್ಯತ್ವದಿಂದ ಬಿಡುಗಡೆ ಗೊಳಿಸುವ ಅವರ ಮನೋಭಾವ ವಿಶಾಲವಾದದ್ದು. ಅಸ್ಪೃಶ್ಯರಿಗೆ ಸಮಾಜದಲ್ಲಿ ಸಮಾನತೆ ಕೊಡಿಸಲು ಪ್ರಯತ್ನಪಟ್ಟದ್ದು ಈ ವಚನದಲ್ಲಿ ನೋಡಬಹುದು.

***ಅಪ್ಪನು ನಮ್ಮ ಮಾದಾರ ಚನ್ನಯ್ಯ***
***ಬೊಪ್ಪನು ನಮ್ಮ ಡೋಹರ ಕಕ್ಕಯ್ಯ***
***ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ***
***ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯಾ***

*ಎನ್ನನೇ ತಕ್ಕರಿಯರಿ ಕೂಡಲಸಂಗಯ್ಯಾ*

ಸಮಾಜದ ಕಟ್ಟ ಕಡೆಯ ಜನಾಂಗದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಚಿಕ್ಕಯ್ಯ, ಕಿನ್ನರಿ ಬೊಮ್ಮಯ್ಯ ಮುಂತಾದವರಿಗೆ ಹೃದಯತುಂಬಿ ಅಪ್ಪಿ–ಅಪ್ಪ, ಅಜ್ಜ ಎಂದು ಹಾಡಿದರು. ತಮ್ಮ ಮೇಲರಿಮೆಯ ಕುಲದ ಸೋಂಕು ಸುಳಿಯದಂತೆ ಬಸವಣ್ಣನವರು ಅನುಭಾವಿ ಶರಣರನ್ನು ಅಪ್ಪಿದರು. ಶತ ಶತಮಾನಗಳಿಂದ ಮೇಲು ಜಾತಿಯವರ ತುಳಿತಕ್ಕೆ ತುತ್ತಾಗಿ ನಾಯಿ ಬೆಕ್ಕುಗಳಿಗಿಂತಲೂ ಕೀಳಾಗಿ ಪಶು ಬದುಕು ಸಾಗಿಸುತ್ತ ಬಂದ ಕೆಳ ಸಮಾಜದ ಜನರು ಶರಣ ಸಂಸ್ಕೃತಿಯ ಅವಕಾಶದಿಂದ ಅರಿವೂ, ಆಚಾರ, ಅನುಭಾವ ಅಳವಡಿಸಿಕೊಂಡು ಅತ್ಯುನ್ನತ ಬದುಕು ಬಾಳುವುದನ್ನು ಕಂಡ ಬಸವಣ್ಣನವರಿಗೆ ಅದೆಷ್ಟು ಆನಂದ ಅದೆಂಥ ಸಂತೃಪ್ತಿ. ಈ ಸಂತೃಪ್ತಿಯ ಶರಧಿ ತನ್ನ ಸೇವೆಯನ್ನು ಮೀರಿ ಮಿಗಿಲಾಗಿ ಮೆರೆಯಿತು.

**ಉಪಸಂಹಾರ**

ಹೀಗೆ ಒಟ್ಟಿನಲ್ಲಿ ವಚನಕಾರರು ಸಕಲ ಜೀವಿಗಳೂ ತಮ್ಮಂತೆಯೇ ದೇವನಿಂದ ಬಂದಿವೆ. ತಮ್ಮಂತೆಯೇ ಸುಖವನ್ನು ಬಯಸುತ್ತಿವೆ. ಆದುದ್ದರಿಂದ ಜೀವ ಹಿಂಸೆ ಮಹಾಪರಾಧ. ಶ್ರೀಮಂತರು ಬಡವರನ್ನೂ, ಬುದ್ಧಿವಂತರು, ಮುಗ್ಧರನ್ನು, ಅಧಿಕಾರಿಗಳು ಸಾಮಾನ್ಯರನ್ನು, ಜನ ಪ್ರತಿನಿಧಿಗಳು ಜನತೆಯನ್ನು, ನೋವು ನೀಡದೆ ಕರುಣಾ ದೃಷ್ಟಿಯಿಂದ, ಮಾನವೀಯತೆಯ ದೃಷ್ಟಿಯಿಂದ ಕಾಣಬೇಕು. ಸಹಾಯ ಸಹಕಾರ ನೀಡಬೇಕು ಜೀವಿಗಳು ದುಃಖವನ್ನು ನಿವಾರಿಸುವ ಭಾಗ್ಯ ಬಯಸಬೇಕು. ಇದೇ ದಯೆಯ ಸ್ವರೂಪವು ಇದೇ ಮಾನವೀಯ ಸ್ವರೂಪವು ಎಂಬುದನ್ನು ವಚನಕಾರರು ಕಂಡುಕೊಂಡ ಫಲಶೃತಿ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ ಆರ್.ಸಿ. (ಸಂ.) (1971). ಶೂನ್ಯಸಂಪಾದನೆ. ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಕಲಬುರ್ಗಿ ಎಂ.ಎಂ. (1998). ಮಾರ್ಗ–3. ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು.
- ಮುದ್ದೇಬಿಹಾಳ ಆರ್.ಸಿ. (2013). ಸಿವಶರಣೆಯರ ಚರಿತಾಮೃತ. ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
- ತಿಪ್ಪೇರುದ್ರಸ್ವಾಮಿ ಎಚ್. (1998). ಶರಣರ ಅನುಭಾವ ಸಾಹಿತ್ಯ. ಡಿ.ವಿ.ಕೆ. ಮೂರ್ತಿ, ಪ್ರಕಾಶನ, ಮೈಸೂರು.
- ಸಾನೆ ಗುರೂಜಿ. (2001). ಭಾರತೀಯ ಸಂಸ್ಕೃತಿ. ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು.